ವಾಯ್ಸ್ ಆಫ್

RNI NO. KARBIL2017/73799

# ದಂಡು ಎಕ್ಸ್‌ಪ್ರೆಸ್

VOICE OF DANDU EXPRESS

Volume : 05 | August 2022 | Price : Rs : 35/- | Pages :12 | Issue : 14

ಸಂಪುಟ : 05 | ಆಗಸ್ಟ್ 2022 | ರೂ.: ಬೆಲೆ : 35/– | ಪುಟ: 12 | ಸಂಚಿಕೆ : 14


## ಸರ್ವಜ್ಞ ನಗರದಲ್ಲಿ ಆಶ್ವಾಸನ ಫೌಂಡೇಶನ್ನಿಂದ ಪೌರಕಾರ್ಮಿಕರ ಗೌರವಕ್ಕಾಗಿ ಮೂರು ಕಿಲೋಮೀಟರ್ ವಾಕಥಾನ್ ನಡಿಗೆ



ಪ್ರತಿನಿತ್ಯ ಬೆಂಗಳೂರು ನಗರದ ಪರಿಸರವನ್ನು ಆರೋಗ್ಯಕರವಾಗಿ ಸ್ವಚ್ಛವಾಗಿಡಲು ಶ್ರಮಿಸುತ್ತಿರುವ ಶ್ರಮಜೀವಿಗಳಾದ ಪೌರಕಾರ್ಮಿಕರ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ದೃಷ್ಟಿಯನ್ನು ಇಟ್ಟುಕೊಂಡು ಅವರ ಸೇವಾ ಅಭಿವೃದ್ಧಿಗಾಗಿ ಆಶ್ವಾಸನ ಫೌಂಡೇಶನ್ ವತಿಯಿಂದ ಏರ್ಪಡಿಸಿದ ಮೂರು ಕಿಲೋಮೀಟರ್ ನಡೆಗೆ ಯಶಸ್ವಿಯಾಗಿ ಸಂಪನ್ನಗೊಂಡಿತು.

ಸರ್ವಜ್ಞನಗರ ಕ್ಷೇತ್ರದ 8 ವಾರ್ಡ್ ಗಳಿಂದ ಸುಮಾರು 112 ಪೌರಕಾರ್ಮಿಕರು ಮತ್ತು 80 ಸ್ಪರ್ಧಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿ





ದ್ದರು. ಬೆಂಗಳೂರು ಮಹಾನಗರ ಪಾಲಿಕೆ ಸರ್ವಜ್ಞ ನಗರ ಕ್ಷೇತ್ರದ ಆರೋಗ್ಯ ಅಧಿಕಾರಿಗಳಾದ ಶ್ರೀ ಹನುಮಂತಪ್ಪ ಮತ್ತು ಸಹೋದ್ಯೋಗಿಗಳು ಪಾಲ್ಗೊಂಡಿದ್ದರು. ಆರೋಗ್ಯಕರವಾದ ಇಂತಹ ಕಾರ್ಯಕ್ರಮವನ್ನು ಮೆಚ್ಚಿ ಸಂಪೂರ್ಣ ಬೆಂಬಲವನ್ನು ನೀಡುತ್ತೇವೆ ಎಂದು ತಿಳಿಸಿದರು.

ಪೌರಕಾರ್ಮಿಕರಿಗೆ ಪದಕಗಳು ಹಾಗೂ ನೆನಪಿನ ಕಾಣಿಕೆಯನ್ನು ನೀಡುವುದರ ಮೂಲಕ ಗೌರವವನ್ನು ಸಲ್ಲಿಸಿದರು. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಪದಕಗಳನ್ನು ಪಡೆದು ಸಂಭ್ರಮಿಸಿದರು.



ಗೌರಿಶಂಕರ್ ಎಂಬುವವರು ಪೌರಕಾರ್ಮಿಕರ ಪಾದಸ್ಪರ್ಶ ಮಾಡಿ ಗೌರವ ಸಲ್ಲಿಸಿದ್ದು ವಿಶೇಷವಾಗಿತ್ತು.

ಆಶ್ವಾಸನ ಫೌಂಡೇಶನ್ ಸಂಸ್ಥೆ ಹೀಗೆ ಮಾನವೀಯ ಮೌಲ್ಯಗಳನ್ನು ದೈಹಿಕವಾಗಿ, ಮಾನಸಿಕವಾಗಿ ಮತ್ತು ಭಾವನಾತ್ಮಕವಾಗಿ ಜನರ ನಡುವೆ ಸಂಬಂಧಗಳನ್ನು ಬೆಸೆಯಲು ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಿ ಕಾರ್ಯನಿರ್ವಹಿಸುತ್ತಾ ಬಂದಿದೆ .

ಹೆಚ್ಚಿನ ಶ್ರಮ ವಹಿಸಿ ಕಾರ್ಯಕ್ರಮವನ್ನು ಸಂಘಟಿಸಲು ಪ್ರಮುಖ ಕಾರಣರಾದ ರಾಜೇಶ್ ಸದ್ ಗೋಬನ್ ಅವರಿಗೆ ನಮ್ಮ ಪತ್ರಿಕೆಯ ಪರವಾಗಿ ಅಭಿನಂದನೆಗಳು. ಈ ಕಾರ್ಯಕ್ರಮಕ್ಕೆ ವಾಯ್ಸ ಆಪ್ ದಂಡು ಎಕ್ಸ್ಪ್ರೆಸ್




ಪತ್ರಿಕೆಯು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹಿಸಿದ್ದಕ್ಕಾಗಿ ಆಶ್ವಾಸನ ಫೌಂಡೇಶನ್ ಪತ್ರಿಕೆಯನ್ನು ಗೌರವಿಸಿ ಅಭಿನಂದಿಸಿದರು.